ನಿಲ್ಲುತ್ತದೆ. ಕೆರೆಗಳು ಹಳೆಯವಾದರೂ ಒಡೆದು ಹೋಗುವ ಸ್ಥಿತಿಯಲ್ಲಿರುವುದಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ೫೭ ಕೆರೆಗಳನ್ನು ರಿಪೇರಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ, ವರ್ಷ ವರ್ಷ ೩ ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ೩ ಲಕ್ಷ ರೂಪಾಯಿಗಳಲ್ಲಿ ಸುಮಾರು ೧ ಲಕ್ಷ ರೂಪಾಯಿ ಅಲ್ಲಿರುವ ಚೌಡಿ ಇತರೆ ನೌಕರರುಗಳ ಸಂಬಳಕ್ಕೆ ಆಗುತ್ತದೆ. ಇನ್ನು ೨ ಲಕ್ಷ ರೂಪಾಯಿ ಉಳಿಯುತ್ತದೆ, ಆದರಲ್ಲಿ ೧೪೧ ಕೆರೆಗಳ ರಿಪೇರಿ ಕೆಲಸವಾಗಬೇಕು. ಹಣ ಕಡಿಮೆಯಾಗುವುದರಿಂದ ರಿಪೇರಿಯಾಗುವುದಿಲ್ಲ. ಕೆರೆಗಳು ಶಿಥಿಲವಾಗುತ್ತಾ ಬರುತ್ತವೆ, ಸ್ಪೆಷಲ್ ಆಗಿ ಕೆರೆಗಳ ರಿಪೇರಿ ಮಾಡಕೊಡಬೇಕು. ಎರಡನೆಯದಾಗಿ ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಪ್ರದೇಶ ಬಹಳ ಕಡಿಮೆ ಆದುದರಿಂದ ಸ್ಪೆಷಲ್ ಆಗಿ ಕೆರೆಗಳ ರಿಪೇರಿಗೆ ಹಣವನ್ನು ಒದಗಿಸಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪರಿಶೀಲನೆ ಮಾಡುತ್ತಿದ್ದೇವೆ, ಪ್ರಯಾರಿಟಿ ಮೇಲೆ ಕೆರೆಗಳ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎಲ್. ಶಿವಪ್ಪ.—ತಡಸಲು ಕೆರೆ, ಪರುವಣ್ಣಿಕೆರೆ ಮತ್ತು ಬುರುಡಗಟ್ಟನಕೆರೆಗಳ ರಿಪೇರಿ ಮಾಡಿದರೆ ಸುಮಾರು ೫೦ ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ಪ್ಲಾನ್‌ನಲ್ಲಿ ಸೇರಿಸದಿದ್ದರೆ ಸ್ಪೆಷಲ್ ಆಗಿ ಸೇರಿಸಿ ರಿಪೇರಿ ಕೆಲಸ ಮಾಡಿಸಿಕೊಡಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪ್ಲಾನ್ ಮತ್ತು ಎಸ್ಟಿಮೇಟ್ ತರಿಸಿ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಯಾರಿಟಿ ಮೇಲೆ ಕೆರೆಗಳ ಕೆಲಸವನ್ನು ಮಾಡಿಸುತ್ತೇನೆ.

### (ii) Re : Accident of a KSRTC bus at Kumbalgud.

SRI D. T. RAMU.—Sir, I wish to call the attention of the Minister for Transport and Minor Irrigation to the accident of a K.S.R.T.C. Bus at Kumbalgud on 8th July 1981 and the indifferent attitude of the crew towards the stranded passengers.

SRI M. M. J. SADHYOJATHAPPA.—Sir,

On 8th July 1981 Shri D. T. Ramu, M.L.A. made a complaint to me against the crew of Bus No. MYF-9624 for their not having picked up passengers from the vehicle MYF-7020 which had broken down. The M.L.A. was one of the passengers of the vehicle which had broken down and which was going from Mandya to Bangalore. This complaint was communicated to the Chief Traffic Manager over the telephone for suitable action. Immediately the Chief Traffic Manager issued instructions to the District Traffic Officer, Bangalore. Bus Station to visit the spot where the vehicle had broken down and ascertain the facts of the incident both from the crew of the vehicle MYF-7020 and the Vehicle No. MYF-9624.

In pursuance of the instructions of the Chief Traffic Manager, the District Traffic Officer, Bangalore Bus Station visited the spot where the vehicle had broken down at about 1930 hours on 8th July 1981 to find out the cause of the break down.

.MYF-7020 belonging to Chikkaballapur Deopt of Kolar Division, left Mandya at 1300 hours and broke down near Ramohalli Cross (16 Kms. from Bangalore) due to breakage of spring leaves at about 1445 hours.

Enquiries with the driuer of the breakdown vehicle reveald that due to the spring leaves getting cut, the vehicle broke down near Ramohally cross.

At about 1500 hours vehicle No. MYF-9624 going from Ooty to Bangalore was stopped by the crew of the defective vehicle to tranship the stranded passengers. The driver of Vehicle MYF 9624 Sri G. P. Raju, Badge No. 120 stopped the vehicle accordingly.

On enquiry with the conductor of vehicle No. MYF-9624 Shri N. T. Manje Gwoda, Badge No. 272, it was revealed that he did not pick up passengers since the bus which had broken down was an ordinary bus, whereas the Ooty-Bangalore service which he was conducting was a Semi-luxury Bus. The conductor is new to the service and has put in only 5 months service. There were 13 vacant seats in the Semi-luxury bus. One of the passengers from the brokendown vehicle is reported to have entered the vehicle from the driver's cabin and obstructed the driver from driving the vehicle. This passenger was handed over to t heKengeri Police Station by the driver.

The stranded passengers who were 52 in number were thereafter transhipped by the subsequent non-stop and express services by about 1550 hours and 1600 hours, respectively.

In the meanwhile, instructions had been issued to the Deputy General Manager and Divisional Controller, Bangalore Division to keep the driver and conductor of vehicle No. MYF-9624 off duty and to institute an immediate enquiry into the incident. It is confirmed that the crew have been kept off duty pending enquiry.

On 9th July 1981 the District Traffic Officer, Bangalore Bus Station contacted Sri D. T. Ramu, M.L.A. and informed the M.L.A. about the action taken.

The Divisional Traffic Officer, Bangalore Bus Station visited the Kengeri Police Station also and ascertained from Sri V. Srinivasaiah, Assistant Sub-Inspector, Kengeri Police Station the details of the

complaint lodged by Shri G. P. Raju, Driver of Bus No. MYF-9624 against the passenger of brokedown vehicle who had obstructed him in driving the vehicle. It is ascertained that the Police authorities did not register a case against Shri Mohamed Saju Ulla son of Abdul Rahim, N. R. Road, Bangalore, who had been handed over to the Police Station since the driver did not lodge a written complaint.

The Chief Traffic Manager also met me on 9th July 1981 at about 1200 hours and apprised me of the position.

An urgent enquiry has been instituted into the complaint and suitable departmental action would be taken against the delinquent crew.

ಶ್ರೀ ಡಿ. ಟಿ. ರಾಮು.—ಮಾನ್ಯ ಅಧ್ಯಕ್ಷರೇ, ಸಚಿವರು ತಮ್ಮ ಹೇಳಿಕೆಯಲ್ಲಿ ಹೇಳಿರುವುದು ಹೆಚ್ಚು ಕಡಿಮೆ ಸರಿಯೆಂದು ನನಗನಿಸುತ್ತದೆ. ಒಂದೆರಡು ವಿಷಯಗಳಲ್ಲಿ ಅಂದರೆ ಡ್ರೈವರ್ ಸ್ಯಾಂಡಿಡ್ ಪಾಸೆಂಜರ್ಸ್ ಎಂದು ಹೇಳಿರುವುದು ತಪ್ಪು. ನಾನು ವಿಧಾನ ಸಭೆಯಲ್ಲಿ ಭಾಗವಹಿಸಲು ಬಸ್ಸಿನಲ್ಲಿದ್ದೆ. ಮೈನ್ ಷೇಟ್ ಕಟ್ಟಾಗಿ ಬಸ್ಸು ಹತೋಟಿ ತಪ್ಪಿತು. ಗಾರ್ಡ್‌ಸ್ಟೋನ್‌ಗೆ ಹೊಡೆದು ಆಗ ನಾನಿನ್ನು ನಿದ್ದೆಯ ಗುಂಗಿನಲ್ಲಿದ್ದೆ. ಪಕ್ಕದಲ್ಲಿದ್ದ ಕಿಲೋಮೀಟರ್ ಕಲ್ಲಿಗೂ ಹೊಡೆದು ರಸ್ತೆಯ ಆಚೆಗೆ ನುಗ್ಗಿತು. ನುಗ್ಗಿದ ಮೇಲ ಡ್ರೈವರ್ ಬಸ್ಸನ್ನು ಚಾಕಚಕ್ಯತೆಯಿಂದ ತನ್ನ ಪ್ರಾಣವನ್ನು ಲೆಕ್ಕಿಸದೆ, ಅಂದರೆ ಡ್ರೈವರ್ ಏನಾದರೂ ತನ್ನ ಪ್ರಾಣದ ರಕ್ಷಣೆಗೆ ಪ್ರಯತ್ನಪಟ್ಟಿದ್ದರೆ, ೫೦ ಮಂದಿ ಬಹುತೇಕ ಎಲ್ಲ ಮುಗಿಯುತ್ತಿದ್ದು ಬಸ್ಸನ್ನು ಹತೋಟಿಗೆ ತಂದ ಅದೃಷ್ಟವಶಾತ್ ಪ್ರಾಣಹಾನಿ ಆಗಲಿಲ್ಲ. ಬಹಳ ಚಾಕಚಕ್ಯತೆಯಿಂದ ದಿಟ್ಟ ತನದಿಂದ ಡ್ರೈವರ್ ಬಸ್ಸನ್ನು ನಿಲ್ಲಿಸಿದ. ನಮಗೆ ಆಗ ಗರಬಡಿದಂತೆ ದಿಕ್ಕು ತಪ್ಪಿದಂತೆ ಆಯಿತು.

ಅಧ್ಯಕ್ಷರು.—ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೀರಿ, ಮಂತ್ರಿಗಳು ಕೊಟ್ಟ ಹೇಳಿಕೆ ಸರಿಯೆಂದು ಹೇಳಿದ್ದೀರಿ.

ಶ್ರೀ ಡಿ. ಟಿ. ರಾಮು.—ನಾವೆಲ್ಲ ರಸ್ತೆಗೆ ಬಂದ ಮೇಲೆ ಮೂರು ಬಸ್ಸುಗಳು ಬಂದು ಒಂದೂ ಕೂಡ ನಿಲ್ಲಿಸಲಿಲ್ಲ. ನಿಲ್ಲಿಸುವಂತೆ ಮಾಡಿ ಹೊಡೆದುಕೊಂಡು ಹೋಗುತ್ತಿದ್ದರು.

ಸ್ವಾಮಿ, ಸದಾಕಾಲದಲ್ಲೂ ಈ ರೋಡಿನಲ್ಲಿ stranded passengers ಇದ್ದೇ ಇರುತ್ತಾರೆ. ನಾನು ಮೈಸೂರಿಗೆ ಹೋಗಿದ್ದೆ. ಅಲ್ಲಿ ೩ ಬಸ್ಸು ಕೆಟ್ಟು ನಿಂತಿತ್ತು. ಆದುದರಿಂದ ನಾನು ಹೇಳುತ್ತೇನೆ ಸ್ವಾಮಿ ಅಲ್ಲಿ ಯಾವಾಗಲೂ ಒಂದು ಪೆಟ್ರೋಲಿಂಗ್ ಪಾರ್ಟಿ ಮತ್ತು ಚೆಕಿಂಗ್ ಇನ್‌ಸ್ಪೆಕರ್ ಇರಬೇಕು ಎಂದು ಹೇಳುತ್ತೇನೆ. ಜೊತೆಗೆ ಪ್ರಥಮ ಚಿಕಿತ್ಸೆ ಮಾಡತಕ್ಕಂಥಾ ಒಂದು ಫೈದ್ಯಕೀಯ ಡಿಪಾರ್ಟ್‌ಮೆಂಟ್ ಇರಬೇಕು ಎಂದು ಹೇಳುತ್ತೇನೆ ಆ ರಸ್ತೆಯಲ್ಲಿ ದಿನಾಲೂ ಚೆಕ್ ಮಾಡುತ್ತಿದ್ದರೆ ಆ ಕಂಡಕ್ಟರುಗೂ ಮತ್ತು ಡ್ರೈವರುಗೂ ಭಯ ಬರುತ್ತದೆ ಅಲ್ಲದೆ ಈಗ ಡ್ರೈವರ್ ಮತ್ತು ಕಂಡಕ್ಟರ್ ಏನು ಹೊಡೆಯುತ್ತಾರೆ ಅದೂ ಸಹ ನಿಲ್ಲುತ್ತದೆ. ಬಸ್ಸು ಏನಾದರೂ ದಾರಿ ಮಧ್ಯ ಕೆಟ್ಟು ನಿಂತು ಹೋದರೆ ಪೆಟ್ರೋಲಿಂಗ್ ಪಾರ್ಟಿ ಇದ್ದರೆ ತಕ್ಷಣ ರಿಪೇರಿ ಮಾಡಿ ಆ ಜನರನ್ನು ಸುರಕ್ಷಿತವಾಗಿ ಕಳುಹಿಸಬಹುದು, ಏನಾದರೂ ಆಕ್ಸಿಡೆಂಟ್ ವಗೈರೆ ಆದರೆ ಅವರನ್ನು ಆಸ್ಪತ್ರೆಗೂ ಕಳುಹಿಸುವ ಏರ್ಪಾಡು ಮಾಡಬಹುದು. ಆದುದರಿಂದ ತಾವು ನಾಳೆಯಿಂದಲೇ ಒಂದು ಪೆಟ್ರೋಲಿಂಗ್ ಪಾರ್ಟಿಯನ್ನು ಹಾಕಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಬೆಂಗಳೂರು–ಮೈಸೂರು ದಾರಿಯಲ್ಲಿ ಇಂತಿಂಥಾ ಸ್ಥಳದಲ್ಲಿ ಆಕಸ್ಮಿಕವಾಗಿ ಇಂತಹ ಘಟನೆಗಳು ಆಗುತ್ತವೆ ಎಂದು ಸಾಮಾನ್ಯವಾಗಿ ಗೊತ್ತು. ತಮಗೆ ಹೇಳಬೇಕಾದರೆ ಕೆಂಗೇರಿಯಿಂದ ಕುಂಬಳಗೋಡಿಗೆ ಹೋಗುವ ದಾರಿಯಲ್ಲಿ ಸಾಮಾನ್ಯವಾಗಿ ಆಕ್ಸಿಡೆಂಟ್ ಆಗುತ್ತದೆ. ಅಷ್ಟೇ ಅಲ್ಲ ಬೆಂಗಳೂರು–ಮೈಸೂರು ಮಧ್ಯೆ ೬ ಸ್ಪಾಟ್‌ನಲ್ಲಿ ಆಕಸ್ಮಿಕ ಘಟನೆಗಳು

ಆಗುತ್ತದೆ. ಆದುದರಿಂದ ಆ ಓ ಸ್ಥಳದಲ್ಲಿ ಸೂಚನಾ ಫಲಕಗಳನ್ನು ಹಾಕಬೇಕು ಎಂದು ಸಲಹೆ ಮಾಡುತ್ತೇನೆ ಮತ್ತು ಇದರ ಜೊತೆಗೆ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರ್ವ್ಸ್ ಏನು ಇದೆ ಅದನ್ನು ತೆಗೆದು ನೇರ ರಸ್ತೆಯನ್ನಾಗಿ ಮಾಡಿದರೆ ಆಕಸ್ಮಿಕವಾಗಿ ಆಗುವಂಥಾ ಘಟನೆಗಳನ್ನು ತಪ್ಪಿಸಬಹುದು ಎಂದು ಸಲಹೆ ಮಾಡುತ್ತೇನೆ. ಪೆಟ್ರೋಲಿಂಗ್ ಪಾರ್ಟಿಯನ್ನು ತಕ್ಷಣವಾಗಿ ತೆರೆಯಬೇಕೆಂದು ಹೇಳುತ್ತೇನೆ ಏತಕ್ಕೆಂದರೆ ಈಗ ಬೆಂಗಳೂರು ಮೈಸೂರಿಗೆ-ಸೇರಿದ ಹಾಗೆ ಒಂದೊಂದು ಡಿಪೋ ಇದೆ. ಒಂದುವೇಳೆ ಚನ್ನಪಟ್ಟಣದಲ್ಲಿ ಬಸ್ಸು ಕೆಟ್ಟುಹೋದರೆ ಅದಕ್ಕೆ ರಿಲೀಫ್ ಗಾಡಿ ತರಿಸಬೇಕಾದರೆ ಬೆಂಗಳೂರಿಗೆ ತಿಳಿಸಬೇಕಾಗುತ್ತದೆ, ಹಾಗೆಯೇ ಮದ್ದೂರಿನಲ್ಲಿ ಬಸ್ ಏನಾದರೂ ಕೆಟ್ಟು ಹೋದರೆ ಅದಕ್ಕೆ ರಿಲೀಫ್ ಗಾಡಿ ತರಿಸಬೇಕಾದರೆ ಮೈಸೂರಿನ ಡಿಪೋವಿಗೆ ಬರೆದು ತರಿಸಿಕೊಳ್ಳಬೇಕಾಗುತ್ತದೆ. ಇದರಿಂದ ತಕ್ಷಣವಾಗಿ ರಿಲೀಫ್ ಗಾಡಿ ಸಿಕ್ಕುವುದಿಲ್ಲ. ಆದುದರಿಂದ ನಾನು ತಮಗೆ ಈ ಸಂದರ್ಭದಲ್ಲಿ ಸಲಹೆ ಕೊಡುವುದೇನೆಂದರೆ ೫೦ ಮೈಲಿ ಅಂತರದಲ್ಲಿ ಒಂದೊಂದು ಡಿಪೋವನ್ನು ತೆರೆಯಬೇಕು ಎಂದು ಹೇಳುತ್ತೇನೆ, ಹಾಗಾದರೆ ಒಂದು ವೇಳೆ ದಾರಿ ಮಧ್ಯೆ ಬಸ್ಸುಗಳು ಕೆಟ್ಟು ಹೋದರೆ ತಕ್ಷಣವಾಗಿ ಆ ಡಿಪೋಗಳಿಗೆ ಬರೆದು ರಿಲೀಫ್ ಗಾಡಿ ತರಿಸ ಬಹುದು. ಮಾನ್ಯ ಮಂತ್ರಿಗಳು ನಾನು ಹೇಳಿದ ತಕ್ಷಣವೇನೋ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಅದಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾರೀಖು ೮–೭–೧೯೮೧ ರಂದು ನಾವು ಪ್ರಯಾಣ ಮಾಡುತ್ತಿದ್ದ ಬಸ್ಸಿನ ಡ್ರೈವರ್ ಬಹಳ ಜಾಣಾಕ್ಷತನದಿಂದ ಆಗುವಂಥಾ ದುರಂತವನ್ನು ತಪ್ಪಿಸಿದ್ದಾರೆ. ಆದುದರಿಂದ ಅವನಿಗೆ ಒಂದು ಪ್ರಶಸ್ತಿಯನ್ನು ಕೊಡಬೇಕು ಎಂದು ಹೇಳುತ್ತೇನೆ. ಇನ್ನೂ ಅನೇಕ ಸದಸ್ಯರು ಕೂಡ ಶ್ರೀಮಾನ್ ಘಾಡಿಯವರು ಶ್ರೀಮಾನ್ ಪಾಟೀಲರವರು, ಶ್ರೀಮಾನ್ ಬೆಡಗಿಯವರು ಮುಂತಾದವರು ಆಕ್ಸಿಡೆಂಟ್‌ಕ್ಕೆ ಸಿಕ್ಕಿಹಾಕಿಕೊಂಡಿದ್ದರು. ಆದುದರಿಂದ ನಾನು ಮೊದಲು ಈ ಬಗ್ಗೆ ಎನೇನು ಸೂಚನೆ ಹೇಳಿದೆನೋ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ಎಂ. ಸದೋ್ಯಜಾತ.—ಮಾನ್ಯ ಸದಸ್ಯರು ಹೇಳಿದ ಎಲ್ಲಾ ಸಲಹೆಗಳನ್ನು ಕೂಡ ನಾನು ಗಮನದಲ್ಲಿಟ್ಟುಕೊಂಡು ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ನೋಡಿ ತೆಗೆದುಕೊಳ್ಳುತ್ತೇನೆ.

## Repesentations by members

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, Post Matric Hostel for Boys and Girls, Rajajinagar, ದಲ್ಲಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರುಗಳು ಫಸ್ಟ್ ಬಿ. ಕಾಂ., ಮತ್ತು ಸೆಕೆಂಡ್‌ಈಯರ್ ಬಿ. ಕಾಂ., ನಲ್ಲಿ ಏನು ಓದುತ್ತಿದ್ದರು ಅವರ ರಿಸಲ್ಟ್ ಇನ್ನೂ ಬಂದಿಲ್ಲಾ. ಅದು ಕ್ಯಾರಿ ಓವ್ ಸಿಸ್ಟಂ. ಆದರ ರಿಸಲ್ಟ್ ಬಂದ ಹೊರತು ಆ ಹಾಸ್ಟಲಿಗೆ ಅಡ್ಮಿಷನ್ ಮಾಡಿಕೊಳ್ಳುವುದಿಲ್ಲ. ಅವರೆಲ್ಲಾ ಈಗ ಲೆಜಿಸ್ಲೇಚರ್ ಪೋಂನಲ್ಲಿದ್ದಾರೆ, ಆದುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನ ಸೆಳೆಯುವುದೇನೆಂದರೆ ಅವರ ರಿಸಲ್ಟ್ ಬರಲಿ ಬರದೇ ಇರಲಿ ಅವರನ್ನು ಏತಕ್ಕೆ ಅಡ್ಮಿಷನ್ ಮಾಡಿಕೊಳ್ಳಬಾರದು ಎಂದು ಕೇಳುತ್ತೇನೆ. ಆ ಹಾಸ್ಟಲ್‌ನಲ್ಲಿ ೫೦ ಜನ ಹೆಣ್ಣು ಮಕ್ಕಳು ೧೫೦ ಜನ ಗಂಡು ಮಕ್ಕಳು ಇದ್ದಾರೆ. ಅವರೆಲ್ಲಾ ಈಗ ಎಲ್. ಪೆಚ್. ನಲ್ಲಿದ್ದಾರೆ. ತಾವು ಈ ಬಗ್ಗೆ ಒಂದು ವ್ಯವಸ್ಥೆ ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಸ್ವಾಮಿ, ಗುಲ್ಬರ್ಗಾ ಇಂಜಿಯರಿಂಗ್ ಕಾಲೇಜಿನ ಅಡ್ಮಿಷನ್ ಬಗ್ಗೆ ತಮ್ಮ ಛೇಂಬರ್‌ನಲ್ಲಿ ಮಾತನಾಡಿದ್ದೆ ಮತ್ತು ಈ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನೂ ಸಹ ಕಳುಹಿಸಿದ್ದೇನೆ.